ದಿನಾಂಕ 12-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಾದಿಗಳ ಪರ ಶ್ರೀ ಎಸ್.ಎಲ್.ಬಿ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಂಗತಿಗಳು ಸತ್ಯದಿಂದ ಕೂಡಿದ್ದು, ಪ್ರಮಾಣ ಪತ್ರದಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನೋಡಿ ಗುರುತಿಸುತ್ತೇನೆ.

| | |
|---|---|
| ನಿ.ಪಿ-1 | ಸ ನಂಃ 165 ರ ಪಹಣಿ ಪತ್ರಿಕೆ |
| ನಿ.ಪಿ-2 | ದಿಃ 25-02-1976 ರ ಭೂ ನ್ಯಾಯ ಮಂಡಳಿಯ ಆದೇಶದ ದೃಢೀಕೃತ ನಕಲು |
| ನಿ.ಪಿ-3 | ಫಾರಂ ನಂಃ 10 ರ ದೃಢೀಕೃತ ನಕಲು |
| ನಿ.ಪಿ-4 | ಎಂ ಇ ನಂಃ1276 ರ ದೃಢೀಕೃತ ನಕಲು |
| ನಿ.ಪಿ-5 | ಎಂ ಇ ನಂಃ1359 ರ ದೃಢೀಕೃತ ನಕಲು |
| ನಿ.ಪಿ-6 | ಎಂ ಇ ನಂಃ1378 ರ ದೃಢೀಕೃತ ನಕಲು |
| ನಿ.ಪಿ-7 | ದಿಃ 07-12-2024 ರಂದು ತಹಶೀಲ್ದಾರವರಿಗೆ ನೀಡಿರುವ ಅರ್ಜಿಯ ಕಛೇರಿ ಪ್ರತಿ |
| ನಿ.ಪಿ-8 ಮತ್ತು 9 | 2- ಅಂಚೆ ರಸೀದಿಗಳು |
| ನಿ.ಪಿ-10 | ದಿಃ 17-07-2025 ರಂದು ವಿಜಯವಾಣಿ ದಿನ ಪತ್ರಿಕಾ ಪ್ರಕಟಣೆಯ ಪ್ರತಿ |

ಆದ್ದರಿಂದ ಡಿಕ್ರಿಯನ್ನು ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.



**ಪಾಟೀ ಸವಾಲುಃ 4, 6, 7 ಮತ್ತು 9 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಎಂ.ಹೆಚ್ ವಕೀಲರಿಂದಃ**

ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಸದರಿ ಪ್ರತಿವಾದಿಗಳು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ